# ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಗೃಹಲಕ್ಷ್ಮಿ ಯೋಜನೆ: ಒಂದು ಅಧ್ಯಯನ

**ಸೌಮ್ಯ ಜಿ.ಆರ್.***

**DOI: https://doi.org/10.5281/zenodo.22302250**

**ABSTRACT**

ಮಹಿಳೆಯರ ಆರ್ಥಿಕ ಸಬಲೀಕರಣ ಎಂದರೆ ಮಹಿಳೆಯರಿಗೆ ಉದ್ಯೋಗ, ಆದಾಯ, ಶಿಕ್ಷಣ, ಕೌಶಲ್ಯ, ಆಸ್ತಿ, ಹಣಕಾಸಿನ ಸಂಪನ್ಮೂಲಗಳು ಮತ್ತು ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರದಲ್ಲಿ ಸಮಾನ ಅವಕಾಶಗಳನ್ನು ಒದಗಿಸುವ ಪ್ರಕ್ರಿಯೆ. ಇದು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಸಮಾಜದ ಅಭಿವೃದ್ಧಿಯಲ್ಲಿ ಸಮಾನವಾಗಿ ಭಾಗವಹಿಸಲು ಸಹಾಯ ಮಾಡುತ್ತದೆ. ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಮಹಿಳೆಯರನ್ನು ಸಶಕ್ತಗೊಳಿಸುವುದು ಸರ್ಕಾರದ ಮುಖ್ಯ ಗುರಿಯಾಗಿದೆ. ರಾಜ್ಯ ಸರ್ಕಾರವು 2007–08ರಿಂದಲೇ ಮಹಿಳಾ ಉದ್ದೇಶಿತ ಆಯವ್ಯಯ ಮಂಡಿಸುವ ಮೂಲಕ ಮಹಿಳೆಯರಿಗಾಗಿ ಪ್ರತ್ಯೇಕ ಅನುದಾನ ಮೀಸಲಿಡುತ್ತಿರುವುದು ವಿಶೇಷ. ಮಹಿಳೆಯರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಗೃಹಲಕ್ಷ್ಮಿ ಯೋಜನೆಯು ಸಮಾಜದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣದ ಮಹತ್ವದ ಹೆಜ್ಜೆಯಾಗಿದೆ. ಪ್ರಸ್ತುತ ಅಧ್ಯಯನವು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಗೃಹಲಕ್ಷ್ಮಿ ಯೋಜನೆಯ ಮಹತ್ವವನ್ನು ತಿಳಿಯುವುದಾಗಿದೆ. ಈ ಅಧ್ಯಯನಕ್ಕೆ ಪೂರಕವಾಗಿ ಚಿತ್ರದುರ್ಗ ತಾಲ್ಲೂಕಿನ ಮೆದೇಹಳ್ಳಿ ಗ್ರಾಮದ ಮಹಿಳೆಯರನ್ನು ಸಮಗ್ರವಾಗಿ ಆಯ್ಕೆಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನವು ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹಾಗೂ ಮಹಿಳೆಯರ ಆರ್ಥಿಕ ಸಬಲೀಕರಣದ ಮೇಲೆ ಬೆಳಕು ಚೆಲ್ಲುತ್ತದೆ.

* **ಸೌಮ್ಯ ಜಿ.ಆರ್.,** ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ.

**KEYWORDS:** ಮಹಿಳೆಯರ ಆರ್ಥಿಕ ಸಬಲೀಕರಣ, ಗೃಹಲಕ್ಷ್ಮಿ ಯೋಜನೆ.

**ಪೀಠಿಕೆ:**

ಮಾನವ ಜನಾಂಗವನ್ನು ಸ್ತ್ರೀಯರು ಮತ್ತು ಪುರುಷರು ಎಂದು ಎರಡು ಸಮೂಹಗಳಾಗಿ ವರ್ಗೀಕರಿಸುವ ಪರಿಪಾಠ ಎಲ್ಲಾ ಕಡೆಗಳಲ್ಲೂ ಇದೆ. ಈ ಒಂದು ಕಾರಣಕ್ಕಾಗಿಯೇ ಅವರುಗಳ ನಡುವೆ ಬಹಳಷ್ಟು ವ್ಯತ್ಯಾಸಗಳು ಹುಟ್ಟಿಕೊಂಡಿವೆ. ಅವರುಗಳ ಆಸೆ-ಆಕಾಂಕ್ಷೆ, ಧ್ಯೇಯ-ಧೋರಣೆಗಳು, ವೇಷ-ಭೂಷಣಗಳು, ಕೆಲಸ-ಹೊಣೆಗಾರಿಕೆಗಳು ಹಾಗೂ ಪಾತ್ರ ಅಂತಸ್ತುಗಳು ಬೇರೆ ಬೇರೆಯಾಗಿವೆ. ಸ್ತ್ರೀ-ಪುರುಷರು ಎಲ್ಲಾ ದೃಷ್ಟಿಗಳಿಂದಲೂ ಸರಿಸಮಾನರಾಗಿದ್ದ ಉದಾಹರಣೆ ಇತಿಹಾಸದಲ್ಲಿಲ್ಲ, ಇದ್ದಿರಬಹುದಾದರೂ ಅದನ್ನು ಕೈಗೂಡಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಿರಲಿಲ್ಲ. ಭಾರತದ ಬಗೆಗೂ ಈ ಮಾತು ನಿಜವಾಗಿದೆ. ಜಗತ್ತಿನ ಹೆಚ್ಚಿನ ಸಮಾಜಗಳ ಕೆಲವು ಅಪವಾದಗಳ ಹೊರತಾಗಿ ಜನಸಂಖ್ಯೆಯ ಸುಮಾರು ಅರ್ಧಭಾಗದಷ್ಟಿರುವ ಮಹಿಳೆಯರು ಸಮಾಜದ ಆಗು-ಹೋಗುಗಳಲ್ಲಿ, ಏಳು-ಬೀಳುಗಳಲ್ಲಿ, ಸಾಧನೆ ಪ್ರಗತಿಯಲ್ಲಿ ಹೆಚ್ಚು ಕಡಿಮೆ ಪುರುಷರಷ್ಟೇ ಸಮಭಾಗಿಗಳು, ಆದರೆ ಇತ್ತೀಚಿನ ವರ್ಷಗಳವರೆಗೂ ಅವರ ಆರ್ಥಿಕ ಸಬಲೀಕರಣದ ಬಗ್ಗೆ ಯಾರೂ ಹೆಚ್ಚಿನ ಗಮನ ವಹಿಸಿದಂತೆ ಕಾಣುವುದಿಲ್ಲ.

**ಮಹಿಳೆಯರ ಆರ್ಥಿಕ ಸಬಲೀಕರಣ:**

ಮಹಿಳೆಯರ ಆರ್ಥಿಕ ಸಬಲೀಕರಣ ಎಂದರೆ ಮಹಿಳೆಯರಿಗೆ ಉದ್ಯೋಗ, ಆದಾಯ, ಶಿಕ್ಷಣ, ಕೌಶಲ್ಯ, ಆಸ್ತಿ, ಹಣಕಾಸಿನ ಸಂಪನ್ಮೂಲಗಳು ಮತ್ತು ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರದಲ್ಲಿ ಸಮಾನ ಅವಕಾಶಗಳನ್ನು ಒದಗಿಸುವ ಪ್ರಕ್ರಿಯೆ. ಇದು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಸಮಾಜದ ಅಭಿವೃದ್ಧಿಯಲ್ಲಿ ಸಮಾನವಾಗಿ ಭಾಗವಹಿಸಲು ಸಹಾಯ ಮಾಡುತ್ತದೆ. ಲಿಂಗ ತಾರತಮ್ಯ, ಅಸಮಾನತೆ, ಅನರ್ಹತೆ ಹಾಗೂ ಇನ್ನಿತರೆ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಿ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು ಮಹಿಳಾ ಸಬಲೀಕರಣ ಪ್ರಕ್ರಿಯೆ ಎನ್ನಬಹುದು. ವಿಶ್ವ ಬ್ಯಾಂಕ್: ಮಹಿಳೆಯರ ಆರ್ಥಿಕ ಸಬಲೀಕರಣವು ಮಹಿಳೆಯರು ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಅವುಗಳನ್ನು ಕಾರ್ಯರೂಪಕ್ಕೆ

ತರುವ ಸಾಮರ್ಥ್ಯ ಹಾಗೂ ಆರ್ಥಿಕ ಅವಕಾಶಗಳಿಂದ ಪ್ರಯೋಜನ ಪಡೆಯುವ ಸಾಮರ್ಥ್ಯಕ್ಕೆ ಸಂಬಂಧಿಸಿದೆ. ಉದ್ಯೋಗ, ಆದಾಯ, ಆಸ್ತಿ, ಹಣಕಾಸಿನ ಸಂಪನ್ಮೂಲಗಳು ಮತ್ತು ಆರ್ಥಿಕ ನಿರ್ಧಾರಗಳಲ್ಲಿ ಮಹಿಳೆಯರ ಪ್ರವೇಶ ಮತ್ತು ಅಧಿಕಾರವನ್ನು ಹೆಚ್ಚಿಸುವ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವ ಪ್ರಕ್ರಿಯೆ. ಮಹಿಳೆಯರು ಆರ್ಥಿಕ ಜೀವನದಲ್ಲಿ ಸಮಾನವಾಗಿ ಭಾಗವಹಿಸುವ ಸಾಮರ್ಥ್ಯ ಹೊಂದಿರುವುದು, ಉತ್ತಮ ಉದ್ಯೋಗ, ಸಂಪನ್ಮೂಲಗಳು ಮತ್ತು ಆರ್ಥಿಕ ಅವಕಾಶಗಳಿಗೆ ಪ್ರವೇಶ ಪಡೆಯುವುದು ಆರ್ಥಿಕ ಸಬಲೀಕರಣದ ಭಾಗವಾಗಿದೆ.

**ಮಹಿಳೆಯರನ್ನು ಸ್ವಾವಲಂಬಿಯಾಗಿಸಿದ ಗೃಹಲಕ್ಷ್ಮಿ :**

ರಾಜ್ಯದಲ್ಲಿ ಮಹಿಳೆಯರ ಸಬಲೀಕರಣ ಮತ್ತು ಆರ್ಥಿಕ ಸ್ವಾವಲಂಬನೆ, ತಾವು ಬಯಸಿದಂತೆ ಬೆಳವಣಿಗೆ ಹೊಂದಲು ಪೂರಕವಾದ ಉತ್ತೇಜನ ನೆರವು ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ "ಗೃಹಲಕ್ಷ್ಮಿ" ಯೋಜನೆ ಜಾರಿಗೊಳಿಸಿದೆ. ಕುಟುಂಬದ ಯಜಮಾನಿ ಮಹಿಳೆಗೆ ಮಾಸಿಕ 2000 ರೂ. ನೆರವು ನೀಡುವ ಮಹತ್ವಾಕಾಂಕ್ಷಿ "ಗೃಹಲಕ್ಷ್ಮಿ" ಯೋಜನೆಯು ಬಡ, ಕೆಳ, ಮಧ್ಯಮ ವರ್ಗದ ಮಹಿಳೆಯರ ಬದುಕಿನ ದಿಕ್ಕನ್ನೇ ಬದಲಾಯಿಸಿರುವ ಬಗ್ಗೆ ಚರ್ಚೆಯಾಗುತ್ತಿರುವುದನ್ನು ಕಾಣಬಹುದು. ಒಟ್ಟು 1,24,12,000 ಫಲಾನುಭವಿಗಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಪಂಚ ಗ್ಯಾರಂಟಿಗಳಲ್ಲಿ ಪ್ರಮುಖವಾದ ಗೃಹಲಕ್ಷ್ಮಿ ಯೋಜನೆಯಡಿ ನೆರವು ಪಡೆಯುವ ಅರ್ಹ ಯಜಮಾನಿಯರ ಬ್ಯಾಂಕ್ ಖಾತೆಗೆ ಮಾಸಿಕ 2000 ರೂ. ನೆರವಿನ ಮೊತ್ತವನ್ನು ಡಿಬಿಟಿ ಮೂಲಕ ವರ್ಗಾವಣೆ ಮಾಡುವ ಪ್ರಕ್ರಿಯೆ ಆರಂಭವಾಗಿ ಎರಡೂವರೆ ವರ್ಷ ಕಳೆದಿದೆ. 2023ರ ಆಗಸ್ಟ್ 30ರಂದು ಫಲಾನುಭವಿ ಮಹಿಳೆಯರ ಬ್ಯಾಂಕ್ ಖಾತೆಗೆ ನೆರವಿನ ಮೊತ್ತ ಜಮೆಯಾಗಲಾರಂಭಿಸಿದ್ದು, ಮಹಿಳೆಯರು ತಮ್ಮ ಕುಟುಂಬವನ್ನು ಸಮರ್ಥವಾಗಿ ಮುನ್ನಡೆಸಲು, ಆರ್ಥಿಕವಾಗಿ ಸ್ವಾವಲಂಬಿಗಳಾಗಲು, ತಮ್ಮ ಇಚ್ಛೆಯಂತೆ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಿರುವ ನಾನಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ಅದರಲ್ಲಿ "ಗೃಹಲಕ್ಷ್ಮಿ" ಯೋಜನೆ ಪ್ರಮುಖವೆನಿಸಿದೆ. ಫಲಾನುಭವಿ ಮಹಿಳೆಯರು ಮಾಸಿಕ ನೆರವಿನ ಮೊತ್ತವನ್ನು ಕೂಡಿಟ್ಟುಕೊಂಡು ಜೀವನಾವಶ್ಯಕ ವಸ್ತುಗಳ ಖರೀದಿ, ಹೊಸ ಉದ್ದಿಮೆ, ವ್ಯವಹಾರ ಆರಂಭಕ್ಕೆ ಮೂಲಧನವಾಗಿ ಬಳಸಿಕೊಂಡಿರುವ ಸಾಕಷ್ಟು ಉದಾಹರಣೆಗಳಿವೆ. ಮಹಿಳೆಯರ ಬದುಕಿನಲ್ಲಿ ಸುಧಾರಣೆ ತಂದ ಪ್ರೇರಣದಾಯಕ ಯಶೋಗಾಥೆಗಳ ಒಂದು ನೋಟ ಇಲ್ಲಿದೆ (ವಿಜಯ ಕರ್ನಾಟಕ 10/01/2026).

**ಶಿಕ್ಷಣಕ್ಕೆ ನೆರವಾದ ಗೃಹಲಕ್ಷ್ಮಿ :**

2024ರಲ್ಲಿ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವೇದಾಂತ್ ಕುಟುಂಬಕ್ಕೆ ಗೃಹಲಕ್ಷ್ಮಿ ಯೋಜನೆಯ ನೆರವಿನ ಹಣ

ಆಸರೆಯಾಗಿದ್ದು ಶಿಕ್ಷಣ ಪಡೆಯಲು ನೆರವಾಗಿದ್ದು ಈ ಯೋಜನೆಯ ಸಾರ್ಥಕತೆಗೆ ಮತ್ತೊಂದು ಸಾಕ್ಷಿ ಎನಿಸಿದೆ. ತಂದೆ ಇಲ್ಲದ ವೇದಾಂತ್‌ಗೆ ಅವರ ತಾಯಿಯೇ ಆಸರೆ. ಗೃಹಲಕ್ಷ್ಮಿ ಯೋಜನೆಯಡಿ ದೊರೆತ ನೆರವು ಶಿಕ್ಷಣ, ಹಾಸ್ಟೆಲ್ ವಾಸ್ತವ್ಯ, ಇತರೆ ಅಗತ್ಯ ವೆಚ್ಚಗಳಿಗೆ ಬಳಸಲು ಸಹಕಾರಿಯಾಗಿರುವುದು ವಿಶೇಷ.

**ಜೀವನ ರೂಪಿಸಿಕೊಳ್ಳಲು ನೆರವಾದ ಗೃಹಲಕ್ಷ್ಮಿ :**

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ನೀರಲಗಿ ಗ್ರಾಮದ ದಾಕ್ಷಾಯಿಣಿ ಪಾಟೀಲ್ ಎಂಬುವರು ಗೃಹಲಕ್ಷ್ಮಿ ಯೋಜನೆಯಡಿ ಪಡೆದ ಹಣವನ್ನು ಕೂಡಿಟ್ಟು ಸೊಸೆಗಾಗಿ ಫ್ಯಾನ್ಸಿ ಸ್ಟೋರ್ ತೆರೆದು ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದು ಗಮನಾರ್ಹ. ಗೃಹಲಕ್ಷ್ಮಿ ಯೋಜನೆಯಡಿ ಪಡೆದ 10 ಕಂತಿನ ನೆರವಿನ ಮೊತ್ತ ಒಟ್ಟುಗೂಡಿಸಿ 20,000 ರೂಗಳನ್ನು ದಾಕ್ಷಾಯಿಣಿ ಅವರು ತಮ್ಮ ಸೊಸೆ ಕುಮಾರಿ ಅವರಿಗೆ ನೀಡಿದ್ದರು. ಸ್ವಂತ ಉದ್ಯೋಗ ಆರಂಭಿಸಬೇಕೆಂಬ ಸೊಸೆಯ ಕನಸಿಗೆ ಒತ್ತಾಸೆಯಾದರು. ಆ ಹಣದಲ್ಲಿ ಸೊಸೆ ಫ್ಯಾನ್ಸಿ ಸ್ಟೋರ್ ತೆರೆದು ಸ್ವಾವಲಂಬಿಯಾಗುವತ್ತ ಹೆಜ್ಜೆ ಇಟ್ಟಿದ್ದಾರೆ. ಹೀಗೆ ಗೃಹಲಕ್ಷ್ಮಿ ಯೋಜನೆಯು ಕುಟುಂಬದಲ್ಲಿ ಸಂಬಂಧ, ಬಾಂಧವ್ಯವನ್ನು ಇನ್ನಷ್ಟು ಬಲವಾಗಿ ಬೆಸೆಯುವಲ್ಲಿಯೂ ಸಹಕಾರಿಯಾಗಿದೆ. ಗೃಹಲಕ್ಷ್ಮಿ ಯೋಜನೆಯ ನೆರವಿನ ಮೊತ್ತವನ್ನು ಒಟ್ಟುಗೂಡಿಸಿ ಫಲಾನುಭವಿ ಮಹಿಳೆಯರು ಹತ್ತಾರು ಪ್ರಯೋಜನ ಪಡೆದಿರುವುದು ಕಾಣಬಹುದು. ಮೊಬೈಲ್, ಫ್ರಿಡ್ಜ್, ವಾಷಿಂಗ್ ಮಿಷನ್, ಪೀಠೋಪಕರಣ ಸೇರಿದಂತೆ ಗೃಹೋಪಯೋಗಿ ಸಲಕರಣೆಗಳನ್ನು ಖರೀದಿಸುವ ಮೂಲಕ ಜೀವನ ಮಟ್ಟ ಸುಧಾರಿಸಿಕೊಂಡಿರುವ ಸಾವಿರಾರು ಉದಾಹರಣೆಗಳಿವೆ.

**ಅಧ್ಯಯನದ ಉದ್ದೇಶಗಳು:**

- ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು.
- ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಗೃಹಲಕ್ಷ್ಮಿ ಯೋಜನೆಯ ಪಾತ್ರವನ್ನು ತಿಳಿಯುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು:**

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ/ದತ್ತಾಂಶ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ಸಾಧನಗಳನ್ನು ಬಳಸಿಕೊಂಡು ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳೆರಡರಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರಾಧ್ಯಯನ ಕಾರ್ಯವನ್ನು ಕೈಗೊಂಡು ಸಂಶೋಧನೆಗೆ ಅಗತ್ಯವಿರುವ ಮಾಹಿತಿಯನ್ನು ಸಂದರ್ಶನಾ ಅನುಸೂಚಿಯನ್ನು ಬಳಸಿಕೊಂಡು ನಮ್ಮ ಅಧ್ಯಯನ ಕ್ಷೇತ್ರದಲ್ಲಿ ಆಯ್ಕೆಯಾಗಿರುವ ಸಂದರ್ಶಿತರನ್ನು ಭೇಟಿಮಾಡಿ ನಾವೇ ಅವರಿಗೆ ಪ್ರಶ್ನೆಗಳನ್ನು ಕೇಳಿ ನಾವೇ ಉತ್ತರವನ್ನು ಬರೆದುಕೊಳ್ಳುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನ ಕಾರ್ಯಕ್ಷೇತ್ರ ಮತ್ತು ಜನಸಂಖ್ಯಾ ಮಾದರಿಯ ಆಯ್ಕೆ: ಪ್ರಸ್ತುತ ಅಧ್ಯಯನವು ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಗೃಹಲಕ್ಷ್ಮಿ ಯೋಜನೆ ಒಂದು ಅಧ್ಯಯನ ಚಿತ್ರದುರ್ಗ ತಾಲ್ಲೂಕಿನ ಮೆದೇಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಎಂಬ ವಿಷಯಕ್ಕೆ ಮೆದೇಹಳ್ಳಿ ಗ್ರಾಮಕ್ಕೆ ಸೀಮಿತಗೊಳಿಸಿ 50 ಜನ ಮಹಿಳಾ ಸದಸ್ಯರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದ ಮೂಲಕ ಆಯ್ಕೆಮಾಡಿಕೊಂಡು ಅಗತ್ಯ ಸಂಶೋಧನಾ ತಂತ್ರ ಹಾಗೂ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆ:** ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆಮಾಡುವುದು ಸೂಕ್ತವಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ/ಆನುಷಂಗಿಕ ಮೂಲಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಾಥಮಿಕ ಮೂಲಗಳು ಅಧ್ಯಯನ ಕ್ಷೇತ್ರದಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದಾಗಿದೆ. ಮಾಹಿತಿ ಸಂಗ್ರಹಣೆಯ ಮೂಲಗಳಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಅವುಗಳೆಂದರೆ:

**ಪ್ರಾಥಮಿಕ ಮಾಹಿತಿ:** ಸಂಶೋಧನಾ ಅನುಸೂಚಿಯನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲು ಸಂಶೋಧಕರು ಕಾರ್ಯಪ್ರವೃತ್ತರಾಗಿದ್ದು, ವಾಸ್ತವಿಕ ಕ್ಷೇತ್ರದಿಂದ ತಾವೇ ನೇರವಾಗಿ ಮಾಹಿತಿದಾರರನ್ನು ಭೇಟಿಮಾಡಿ, ಅವಲೋಕಿಸಿ, ಸಂದರ್ಶನಕ್ಕೆ ಒಳಪಡಿಸಿ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಧ್ಯಮಿಕ ಮಾಹಿತಿ:** ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಮಾಧ್ಯಮಿಕ ಮಾಹಿತಿಯನ್ನು ಪುಸ್ತಕಗಳು, ಗ್ರಂಥಗಳು, ಪತ್ರಿಕೆಗಳು, ಅಂತರ್ಜಾಲ, ಸರ್ಕಾರಿ ಇಲಾಖಾ ದಾಖಲಾತಿಗಳು, ಜನಗಣತಿ ದಾಖಲಾತಿಗಳು, ಸಮೀಕ್ಷಾ ವರದಿಗಳು, ಮಹಾಪ್ರಬಂಧಗಳು ಇನ್ನು ಮುಂತಾದವುಗಳಿಂದ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿಯ ವಿಶ್ಲೇಷಣೆ**

**ಕೋಷ್ಟಕ–1:** ಮಾಹಿತಿದಾರರ ವಯೋಮಾನಕ್ಕೆ ಸಂಬಂಧಿಸಿದ ವಿವರ

| ವಯೋಮಾನ (ವರ್ಷ) | ಆವೃತ್ತಿ | ಶೇಕಡವಾರು |
|---|---|---|
| 20–30 | 10 | 20% |
| 30–40 | 20 | 40% |
| 40–50 | 15 | 30% |
| 50 ವರ್ಷಕ್ಕಿಂತ ಹೆಚ್ಚು | 05 | 10% |
| ಒಟ್ಟು | 50 | 100% |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ವಯೋಮಾನದ ವಿವರಗಳನ್ನು ನೀಡಲಾಗಿದೆ. ಒಟ್ಟು ಸಂದರ್ಶಿತರಲ್ಲಿ, ಶೇಕಡ 20ರಷ್ಟು 20ರಿಂದ 30 ವರ್ಷ ವಯಸ್ಸಿನವರು, ಶೇಕಡ 40ರಷ್ಟು 30ರಿಂದ 40 ವರ್ಷ ವಯಸ್ಸಿನವರು, ಶೇಕಡ 30ರಷ್ಟು 40ರಿಂದ 50 ವರ್ಷ ವಯಸ್ಸಿನವರು, ಶೇಕಡ 10ರಷ್ಟು 50 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಕಂಡು ಬಂದಿದ್ದಾರೆ. ಕಾರಣ 30ರಿಂದ 50 ವರ್ಷ ವಯಸ್ಸಿನವರಲ್ಲಿ ದುಡಿಯುವವರು ಹೆಚ್ಚಿರುತ್ತಾರೆ. ಹಾಗಾಗಿ 30ರಿಂದ 50 ವರ್ಷ ವಯಸ್ಸಿನವರು ಶೇಕಡ 70ರಷ್ಟು ಕಂಡು ಬಂದಿದ್ದಾರೆ.

**ಕೋಷ್ಟಕ–2:** ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರ

| ಶೈಕ್ಷಣಿಕ ಮಟ್ಟ | ಆವೃತ್ತಿ | ಶೇಕಡವಾರು |
|---|---|---|
| ಅನಕ್ಷರಸ್ಥರು | 05 | 10% |
| ಪ್ರಾಥಮಿಕ ಶಿಕ್ಷಣ | 20 | 40% |
| ಪ್ರೌಢ ಶಿಕ್ಷಣ | 15 | 30% |
| ಪದವಿ ಪೂರ್ವ ಶಿಕ್ಷಣ | 05 | 10% |
| ಪದವಿ ಶಿಕ್ಷಣ | 05 | 10% |
| ಒಟ್ಟು | 50 | 100% |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಶೈಕ್ಷಣಿಕ ಮಟ್ಟದ ವಿವರಗಳನ್ನು ತಿಳಿಸಲಾಗಿದ್ದು, ಒಟ್ಟು ಮಾಹಿತಿದಾರರಲ್ಲಿ ಶೇಕಡ 10ರಷ್ಟು ಅನಕ್ಷರಸ್ಥರು, ಶೇಕಡ 40ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದವರು, ಶೇಕಡ 30ರಷ್ಟು ಪ್ರೌಢ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಶಿಕ್ಷಣವನ್ನು ಪಡೆದವರು ಕಂಡುಬಂದಿದ್ದಾರೆ.

**ಕೋಷ್ಟಕ–3:** ಮಾಹಿತಿದಾರರ ಜಾತಿಗೆ ಸಂಬಂಧಿಸಿದ ವಿವರ

| ಜಾತಿಯ ವಿವರ | ಆವೃತ್ತಿ | ಶೇಕಡವಾರು |
|---|---|---|
| ಪರಿಶಿಷ್ಟ ಜಾತಿ | 20 | 40% |
| ಪರಿಶಿಷ್ಟ ಪಂಗಡ | 15 | 30% |
| ಇತರೆ ಹಿಂದುಳಿದ ವರ್ಗ | 15 | 30% |
| ಒಟ್ಟು | 50 | 100% |

ಮೇಲ್ಕಂಡ ಕೋಷ್ಟಕದಲ್ಲಿ ಮಾಹಿತಿದಾರರ ಜಾತಿಯ ವಿವರಗಳನ್ನು ತಿಳಿಸಲಾಗಿದ್ದು ಒಟ್ಟಾರೆ ಮಾಹಿತಿದಾರರಲ್ಲಿ ಶೇಕಡ 40ರಷ್ಟು ಪರಿಶಿಷ್ಟ ಜಾತಿಯವರು, ಶೇಕಡ 30ರಷ್ಟು ಪರಿಶಿಷ್ಟ ಪಂಗಡದವರು, ಶೇಕಡ 30ರಷ್ಟು ಇತರೆ ಹಿಂದುಳಿದ ವರ್ಗದವರು ಕಂಡುಬಂದಿದ್ದಾರೆ.

**ಕೋಷ್ಟಕ–4:** ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ವಿವರ

| ಫಲಾನುಭವಿಗಳ ವಿವರ | ಆವೃತ್ತಿ | ಶೇಕಡ |
|---|---|---|
| ಹೌದು | 40 | 80% |
| ಇಲ್ಲ | 10 | 20% |
| ಒಟ್ಟು | 50 | 100% |

ಈ ಮೇಲ್ಕಂಡ ಕೋಷ್ಟಕದಲ್ಲಿ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 80ರಷ್ಟು ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ, ಶೇಕಡ 20ರಷ್ಟು ಮಹಿಳೆಯರು ಫಲಾನುಭವಿಗಳಾಗಿಲ್ಲ. ಕಾರಣ ಈ ಯೋಜನೆಯು ಕುಟುಂಬದ ಹಿರಿಯ ಮಹಿಳೆ ಅಥವಾ ಕುಟುಂಬದ ಯಜಮಾನಿಗೆ ಹಣಕಾಸಿನ ನೆರವು ಸಿಕ್ಕರೆ ಉಳಿದ ಮಹಿಳೆಯರಿಗೆ ಸಿಗುವುದಿಲ್ಲ.

**ಕೋಷ್ಟಕ–5:** ಆರ್ಥಿಕ ಉಳಿತಾಯಕ್ಕೆ ಸಹಕಾರಿಯಾಗಿರುವುದರ ವಿವರ

| ಆರ್ಥಿಕ ಉಳಿತಾಯ | ಆವೃತ್ತಿ | ಶೇಕಡ |
|---|---|---|
| ಹೌದು | 50 | 100% |
| ಇಲ್ಲ | 00 | 00% |
| ಒಟ್ಟು | 50 | 100% |

ಈ ಮೇಲ್ಕಂಡ ಕೋಷ್ಟಕದಲ್ಲಿ ಗೃಹಲಕ್ಷ್ಮಿ ಯೋಜನೆಯು ಮಹಿಳೆಯರ ಆರ್ಥಿಕ ಉಳಿತಾಯಕ್ಕೆ ಸಹಕಾರಿಯಾಗಿರುವುದರ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ಉಳಿತಾಯ ಮಾಡುವುದಾಗಿ ತಿಳಿದಿದ್ದಾರೆ. ಕಾರಣ ಮಹಿಳೆಯರು ಅಲ್ಪಹಣವನ್ನೇ ಆಗಲಿ ತಮ್ಮ ಕಷ್ಟಕಾಲದ ನೆರವಿಗಾಗಿ ಉಳಿಸುತ್ತಾರೆ.

**ಕೋಷ್ಟಕ–6:** ಇಚ್ಛೆಯಂತೆ ಬದುಕು ರೂಪಿಸಿಕೊಳ್ಳಲು ಸಹಕಾರಿಯಾಗಿರುವುದರ ವಿವರ

| ಬದುಕನ್ನು ರೂಪಿಸಿಕೊಳ್ಳಲು | ಆವೃತ್ತಿ | ಶೇಕಡ |
|---|---|---|
| ಹೌದು | 50 | 100% |
| ಇಲ್ಲ | 00 | 00% |
| ಒಟ್ಟು | 50 | 100% |

ಈ ಮೇಲ್ಕಂಡ ಕೋಷ್ಟಕದಲ್ಲಿ ಗೃಹಲಕ್ಷ್ಮಿ ಯೋಜನೆಯು ಮಹಿಳೆಯರ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿರುವುದರ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಬಳಸಿರುವುದಾಗಿ ತಿಳಿಸಿರುತ್ತಾರೆ. ಈ

ಹಣದಿಂದ ವ್ಯಾಪಾರ, ಸ್ವ-ಉದ್ಯೋಗವನ್ನು ಮಾಡಿ ತಮ್ಮ ಬದುಕನ್ನು ರೂಪಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

**ಕೋಷ್ಟಕ-7:** ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ನೆರವಾಗಿರುವುದರ ವಿವರ

| ಜೀವನ ಮಟ್ಟದ ಸುಧಾರಣೆ | ಆವೃತ್ತಿ | ಶೇಕಡ |
|---|---|---|
| ಹೌದು | 50 | 100% |
| ಇಲ್ಲ | 00 | 00% |
| ಒಟ್ಟು | 50 | 100% |

ಈ ಮೇಲ್ಕಂಡ ಕೋಷ್ಟಕದಲ್ಲಿ ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣವನ್ನು ಮಹಿಳೆಯರು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ನೆರವಾಗಿರುವುದರ ವಿವರಗಳನ್ನು ತಿಳಿಸಲಾಗಿದ್ದು, ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ತಮ್ಮ ಜೀವನ ಮಟ್ಟವನ್ನು ರೂಪಿಸಿಕೊಳ್ಳಲು ಬಳಸಿರುವುದಾಗಿ ತಿಳಿಸಿರುತ್ತಾರೆ. ಮಹಿಳೆಯರು ತಮ್ಮ ಮನೆಗೆ ಬೇಕಾದ ವಸ್ತುಗಳನ್ನು (ಟಿ.ವಿ, ಫ್ರಿಡ್ಜ್, ವಾಷಿಂಗ್ ಮೆಶಿನ್, ಮೊಬೈಲ್, ದ್ವಿಚಕ್ರ ವಾಹನ ಇತ್ಯಾದಿ) ಕೊಂಡುಕೊಂಡು ತಮ್ಮ ಬದುಕನ್ನು ಸುಧಾರಿಸಿಕೊಂಡಿದ್ದಾರೆ.

**ಉಪಸಂಹಾರ ಮತ್ತು ಸಲಹೆಗಳು:**

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗೃಹಲಕ್ಷ್ಮಿ ಯೋಜನೆ ಒಂದು ಅಧ್ಯಯನ (ವಿಶೇಷವಾಗಿ ಚಿತ್ರದುರ್ಗ ತಾಲ್ಲೂಕಿನ ಮೆದೇಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ) ಎಂಬ ಅಧ್ಯಯನದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ಹಾಗೂ ಈ ಯೋಜನೆಯಿಂದ ಮಹಿಳೆಯರು ಪಡೆದುಕೊಂಡ ಪ್ರಯೋಜನಗಳ ಬಗ್ಗೆ ಸಂಶೋಧನೆಯನ್ನು ಕೈಗೊಂಡಿದ್ದು, ಇದರಿಂದ ವ್ಯಕ್ತವಾದ ಅಂಶಗಳು ಈ ಕೆಳಗಿನಂತಿವೆ.

**ಸಂಶೋಧನೆಯಿಂದ ವ್ಯಕ್ತವಾದ ಅಂಶಗಳು:**

- ವಯೋಮಾನಕ್ಕೆ ಸಂಬಂಧಿಸಿದಂತೆ ಶೇಕಡ 20ರಷ್ಟು 20ರಿಂದ 30 ವರ್ಷ ವಯಸ್ಸಿನವರು, ಶೇಕಡ 40ರಷ್ಟು 30ರಿಂದ 40 ವರ್ಷ ವಯಸ್ಸಿನವರು, ಶೇಕಡ 30ರಷ್ಟು 40ರಿಂದ 50 ವರ್ಷ ವಯಸ್ಸಿನವರು, ಶೇಕಡ 10ರಷ್ಟು 50 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಕಂಡು ಬಂದಿದ್ದಾರೆ.
- ಶೈಕ್ಷಣಿಕ ವಿವರಕ್ಕೆ ಸಂಬಂಧಿಸಿದಂತೆ ಒಟ್ಟು ಮಾಹಿತಿದಾರರಲ್ಲಿ ಶೇಕಡ 10ರಷ್ಟು ಅನಕ್ಷರಸ್ಥರು, ಶೇಕಡ 40ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದವರು, ಶೇಕಡ 30ರಷ್ಟು ಪ್ರೌಢ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಪೂರ್ವ ಶಿಕ್ಷಣವನ್ನು ಪಡೆದವರು, ಶೇಕಡ 10ರಷ್ಟು ಪದವಿ ಶಿಕ್ಷಣವನ್ನು ಪಡೆದವರು

ಕಂಡುಬಂದಿದ್ದಾರೆ.

- ಜಾತಿಯ ವಿವರಕ್ಕೆ ಸಂಬಂಧಿಸಿದಂತೆ ಒಟ್ಟಾರೆ ಮಾಹಿತಿದಾರರಲ್ಲಿ ಶೇಕಡ 40ರಷ್ಟು ಪರಿಶಿಷ್ಟ ಜಾತಿಯವರು, ಶೇಕಡ 30ರಷ್ಟು ಪರಿಶಿಷ್ಟ ಪಂಗಡದವರು, ಶೇಕಡ 30ರಷ್ಟು ಇತರೆ ಹಿಂದುಳಿದ ವರ್ಗದವರು ಕಂಡುಬಂದಿದ್ದಾರೆ.
- ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 80ರಷ್ಟು ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ, ಶೇಕಡ 20ರಷ್ಟು ಮಹಿಳೆಯರು ಫಲಾನುಭವಿಗಳಾಗಿಲ್ಲ.
- ಕುಟುಂಬ ನಿರ್ವಹಣೆಗೆ ಸಹಕಾರಿಯಾಗಿರುವುದರ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ಕುಟುಂಬ ನಿರ್ವಹಣೆಗೆ ಸಹಕಾರಿಯಾಗಿದೆ ಎಂದಿದ್ದಾರೆ.
- ಆರ್ಥಿಕ ಉಳಿತಾಯಕ್ಕೆ ಸಹಕಾರಿಯಾಗಿರುವುದರ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ಉಳಿತಾಯ ಮಾಡುವುದಾಗಿ ತಿಳಿದಿದ್ದಾರೆ.
- ತಮ್ಮ ಇಚ್ಛೆಯಂತೆ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿರುವುದಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ತಮ್ಮ ಬದುಕನ್ನು ರೂಪಿಸಿಕೊಳ್ಳಲು ಬಳಸಿರುವುದಾಗಿ ತಿಳಿಸಿರುತ್ತಾರೆ.
- ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ನೆರವಾಗಿರುವುದರ ವಿವರಕ್ಕೆ ಸಂಬಂಧಿಸಿದಂತೆ ಶೇಕಡ 100ರಷ್ಟು ಮಹಿಳೆಯರು ತಾವು ಈ ಯೋಜನೆಯಿಂದ ಬಂದಂತಹ ಹಣವನ್ನು ತಮ್ಮ ಜೀವನ ಮಟ್ಟವನ್ನು ರೂಪಿಸಿಕೊಳ್ಳಲು ಬಳಸಿರುವುದಾಗಿ ತಿಳಿಸಿರುತ್ತಾರೆ.

**ಸಲಹೆಗಳು:**

- ಮಹಿಳೆಯರ ಆರ್ಥಿಕ ಸಬಲೀಕರಣದಲ್ಲಿ ಹಾಗೂ ಅವರ ಜೀವನ ಸುಧಾರಣೆಯಲ್ಲಿ ಗೃಹಲಕ್ಷ್ಮಿ ಯೋಜನೆಯೂ ಒಂದು ಕ್ರಾಂತಿಕಾರಕ ಯೋಜನೆಯಾಗಿದ್ದು, ಮಹಿಳೆಯರು ತಮ್ಮ ಇಚ್ಛೆಯಂತೆ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದೆ.
- ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಎಲ್ಲಾ ಮಹಿಳೆಯರಿಗೂ ಇದರ ಫಲಾನುಭವಿಗಳಾಗುವ ಅವಕಾಶ ನೀಡಬೇಕಾಗಿದೆ.
- ತಿಂಗಳಿಗೆ ನೀಡುವ ಹಣದಲ್ಲಿ ಹೆಚ್ಚಳವಾಗಬೇಕಾಗಿದೆ.
- ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ಹಣ ಬರುವಂತಾಗಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಕೃಷ್ಣಮೂರ್ತಿ ಹೊಸಬೀಡು ಎಚ್.ಆರ್., (2007–08), ಭಾರತದ ಆರ್ಥಿಕ ಅಭಿವೃದ್ಧಿ, ಬೆಂಗಳೂರು: ಸಪ್ನ ಬುಕ್ ಹೌಸ್.
2. ಕೃಷ್ಣಯ್ಯಗೌಡ ಎಚ್. ಆರ್, (2012), ಅಭಿವೃದ್ಧಿ ಅರ್ಥಶಾಸ್ತ್ರ, ಗದಗ: ವಿದ್ಯಾನಿಧಿ ಪ್ರಕಾಶನ.
3. ಕೃಷ್ಣಯ್ಯಗೌಡ ಎಚ್. ಆರ್., (2013), ಭಾರತೀಯ ಆರ್ಥಿಕತೆ, ಗದಗ: ವಿದ್ಯಾನಿಧಿ ಪ್ರಕಾಶನ.
4. ರಾಮ್ ಅಹುಜಾ, (2018), ರೀಸರ್ಚ್ ಮೆಥಡ್ಸ್, ನವದೆಹಲಿ: ರಾವತ್ ಪಬ್ಲಿಕೇಷನ್ಸ್.
5. ಲಾಲ್ ದಾಸ್ ಡಿ.ಕೆ., (2014), ಪ್ರಾಕ್ಟೀಸ್ ಆಫ್ ಸೋಷಿಯಲ್ ರೀಸರ್ಚ್, ನವದೆಹಲಿ: ರಾವತ್ ಪಬ್ಲಿಕೇಷನ್ಸ್.